# ‘ಚಂಡೀಕವಚ’ ಸ್ತೋತ್ರದ ಮಾಹಾತ್ಮ್ಯೆ

**ಡಾ. ವಾಗೀಶ್ವರೀ ಶಿವರಾಮ**

ಜಗನ್ಮಾತೆಯ ಚರಿತೆಯನ್ನು ಹೇಳುವ, ಸಾಧನ-ಅನುಷ್ಠಾನಪ್ರಧಾನವಾದ ಗ್ರಂಥವೇ ಶ್ರೀದುರ್ಗಾಸಪ್ತಶತೀ. ಈ ಪವಿತ್ರ ಗ್ರಂಥದ ‘ಕವಚ’ವು ಪಠನದ ಒಂದು ಅಂಗವಾಗಿದೆ. ಇದರ ವಿಷಯ, ಮಹತ್ವಗಳನ್ನು ಇಲ್ಲಿ ವಿವರಿಸಿರುವ ಲೇಖಕರು ಹಿರಿಯ ಸಂಸ್ಕೃತ ವಿದ್ವಾಂಸರು; ಮಂಗಳೂರಿನಲ್ಲಿ ಅಧ್ಯಾಪಕರಾಗಿ ಹಲವು ವರ್ಷ ಸೇವೆ ಸಲ್ಲಿಸಿದ್ದಾರೆ. ಅವರು ಮೂವತ್ತೈದಕ್ಕೂ ಹೆಚ್ಚು ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿಗಳೂ ಹೌದು.

ದೇವೀ ಮಾಹಾತ್ಮ್ಯವನ್ನು ವಿವರಿಸುವ ‘ದುರ್ಗಾಸಪ್ತಶತೀ’ (೭೦೦ ಶ್ಲೋಕಗಳ ಗ್ರಂಥ), ಮಾರ್ಕಂಡೇಯಪುರಾಣದ (೯೦೦೦ ಶ್ಲೋಕಗಳು, ೧೩೪ ಅಧ್ಯಾಯಗಳಿವೆ) ಒಂದು ಭಾಗ. ಮಂತ್ರಶಾಸ್ತ್ರವೆಂದು ಪ್ರಸಿದ್ಧವಾಗಿರುವ ‘ದುರ್ಗಾಸಪ್ತಶತೀ’, ಮಾರ್ಕಂಡೇಯ ಪುರಾಣದ ೭೮ನೇ ಅಧ್ಯಾಯದಿಂದ ೯೦ನೇ ಅಧ್ಯಾಯದವರೆಗೆ ೧೩ ಅಧ್ಯಾಯಗಳಲ್ಲಿ ಮಹಾಕಾಳಿ, ಮಹಾಲಕ್ಷ್ಮೀ ಹಾಗೂ ಮಹಾಸರಸ್ವತಿಯರ ೩ ಚರಿತ್ರೆ ಗಳನ್ನು ೭೦೦ ಶ್ಲೋಕಗಳಲ್ಲಿ ವರ್ಣಿಸುತ್ತದೆ. ಮಾರ್ಕಂಡೇಯ ಮುನಿಗಳು ಕ್ರೌಷ್ಟುಕಿ ಮುನಿಗೆ ಪ್ರಥಮ ಚರಿತ್ರೆಯಲ್ಲಿ (೧ನೇ ಅಧ್ಯಾಯ) ಮಧುಕೈಟಭರ ವಧೆಗೆ ಕಾರಣೀಭೂತಳಾದ ‘ಮಹಾಕಾಳಿ’ಯ, ಮಧ್ಯಮಚರಿತ್ರೆಯಲ್ಲಿ (೩ ಅಧ್ಯಾಯಗಳಲ್ಲಿ) ಮಹಿಷಾಸುರನನ್ನು ಸಂಹರಿಸಿದ ‘ಮಹಾಲಕ್ಷ್ಮಿ’ಯ ಹಾಗೂ ಉತ್ತಮ ಚರಿತ್ರೆಯಲ್ಲಿ (೭ ಅಧ್ಯಾಯಗಳಲ್ಲಿ) ಶುಂಭ- ನಿಶುಂಭರನ್ನು ಸಂಹರಿಸಿದ ‘ಮಹಾಸರಸ್ವತಿ’ಯ ವೈಭವವನ್ನು ವರ್ಣಿಸಿದ್ದಾರೆ. ೧೨ನೇ ಅಧ್ಯಾಯದಲ್ಲಿ ದೇವಿಯೇ ಹೇಳಿರುವ ಫಲಸ್ತುತಿ ಹಾಗೂ ೧೩ನೇ ಅಧ್ಯಾಯದಲ್ಲಿ ಸುಮೇಧ ಮಹರ್ಷಿಗಳಿಂದ ದೇವಿಯ ಮಾಹಾತ್ಮ್ಯೆ ತಿಳಿದು ಸಾಧನೆ ಮಾಡಿದ ಸುರಥರಾಜ ಹಾಗೂ ಸಮಾಧಿ ಎಂಬ ವೈಶ್ಯನು ಪಡೆದ ವರಗಳ ಬಗ್ಗೆ ವಿವರವಿದೆ.

‘ದುರ್ಗಾಸಪ್ತಶತಿ’ಯ ಪ್ರತಿಯೊಂದು ಶ್ಲೋಕವೂ ಮಂತ್ರಕ್ಕೆ ಸಮಾನವಾಗಿದೆ. ಆದ್ದರಿಂದ ಆಪತ್ತುಗಳಿಂದ ಪಾರಾಗಲು, ಇಷ್ಟಾರ್ಥಗಳನ್ನು ಪಡೆದುಕೊಳ್ಳಲು ಅನಾದಿ ಕಾಲದಿಂದ ಭಕ್ತರು ಮನೆಮನೆಗಳಲ್ಲಿಯೂ ದುರ್ಗಾಸಪ್ತಶತಿಯ ಪಾರಾಯಣ ನಡೆಸಿಕೊಂಡು ಬರುತ್ತಿದ್ದಾರೆ. ಪಾರಾಯಣದ ಮೊದಲು ಕವಚ ಸ್ತೋತ್ರ, ಅರ್ಗಲಾ ಸ್ತೋತ್ರ ಹಾಗೂ ಕೀಲಕ ಸ್ತೋತ್ರಗಳ ಜಪ ಹಾಗೂ ಪಾರಾಯಣ, ಅನಂತರ ರಹಸ್ಯತ್ರಯಗಳ (ಪ್ರಾಧಾನಿಕ, ವೈಕೃತಿಕ ಹಾಗೂ ಮೂರ್ತಿ) ಪಠನ, ರಾತ್ರಿಸೂಕ್ತ, ದೇವೀ ಸೂಕ್ತಗಳ ಪಠನ, ನವಾರ್ಣಮಂತ್ರದ ಜಪ, ತರ್ಪಣಗಳೂ ಅನೂಚಾನವಾಗಿ ದೇವಿಯ ಆರಾಧನೆಯ ಅಂಗವಾಗಿ ಅಖಂಡ ಭಾರತದಲ್ಲಿ ಆಚರಣೆಯಲ್ಲಿವೆ.

೭೦೦ ಶ್ಲೋಕಗಳಲ್ಲಿ ವರ್ಣಿತವಾಗಿರುವ ದುರ್ಗಾದೇವಿಯ ಮಾಹಾತ್ಮ್ಯೆಯನ್ನು ಅರಿತು ಮಾಡುವ ಪೂಜೆ, ಪಾರಾಯಣಗಳಿಂದಲೇ ಭಾವಕೋಶವರಳಿ ಭಕ್ತಿಯ ಉದ್ದೀಪನವಾಗಿ, ದೇವಿಯ ಕೃಪೆ ಒದಗಿ ಬರುತ್ತದೆ. ‘**ಯೋ ಅರ್ಥವಿತ್ ಸ ಸರ್ವಂ ಭದ್ರಂ ಅಶ್ನುತೇ**’, – ‘ಯಾರು ಅರ್ಥ ತಿಳಿದು ಮಾಡುತ್ತಾರೋ ಅವರು ಎಲ್ಲಾ ಮಂಗಳವನ್ನು ಪಡೆಯುತ್ತಾರೆ’ — ಎಂದು ಆರ್ಷವಾಣಿ ಉದ್ಘೋಷಿಸಿದೆ. ಕೇವಲ ಗಿಳಿಪಾಠದಿಂದ ಶಾಂತಿ, ನೆಮ್ಮದಿ ದೊರಕಲಾರದು. ಬೆಂಕಿ ಹಚ್ಚಿದಾಗ ಮಾತ್ರ ಒಣಕಟ್ಟಿಗೆ ಪ್ರಜ್ವಲಿಸುವಂತೆ, ಅರ್ಥಜ್ಞಾನವೆಂಬ ಅಗ್ನಿ ಉರಿದಾಗ, ಭಾವನೆಗಳು ಕೋಡಿಯಾಗಿ ಹರಿದು ಮನಸ್ಸು-ಬುದ್ಧಿಯನ್ನು ಪ್ರಚೋದಿಸಲು ಸಾಧ್ಯವಾಗುತ್ತದೆ. ಮಂತ್ರತುಲ್ಯವಾದ ಋಷಿಪ್ರಣೀತ ಸಂಸ್ಕೃತ ಶಬ್ದಗಳು ಹೃದಯಕ್ಕೆ ಸಂಸ್ಕಾರ ನೀಡುತ್ತವೆ.

ಪುರಾಣದ ಕಥೆಗಳಿಂದ ಮನಸ್ಸಿನ ಪರಿವರ್ತನೆ ಸಾಧ್ಯ. ಆತಂಕ ಮತ್ತು ಖಿನ್ನತೆ (Depression), ಆತ್ಮಾಹತ್ಯಾ ಪ್ರವೃತ್ತಿ, ಸನ್ನಡತೆಯ ಕೊರತೆ, ಹಿಂಸಾಪ್ರವೃತ್ತಿ, ಮನಸ್ಸಿನ ಅಸಮತೋಲನ, ಕೀಳರಿಮೆ, ಆಕ್ರಮಣಕಾರಿ ನಡತೆ, ಹೊಂದಾಣಿಕೆಯ ಕೊರತೆ – ಮುಂತಾದ ಮಾನಸಿಕ ರೋಗಗಳಿಗೆ ಮಾರ್ಕಂಡೇಯ ಪುರಾಣದ, ದುರ್ಗಾಸಪ್ತಶತಿಯ ೧೩ ಅಧ್ಯಾಯಗಳ, ಕವಚ-ಅರ್ಗಲ-ಕೀಲಕ ಸ್ತೋತ್ರಗಳ ೩ ಅಧ್ಯಾಯಗಳ ಹಾಗೂ ಅಂತ್ಯದ ರಹಸ್ಯತ್ರಯಗಳ ೩ ಅಧ್ಯಾಯಗಳ (ಒಟ್ಟು ೧೯ ಅಧ್ಯಾಯಗಳು) ಅರ್ಥಾನುಸಂಧಾನಪೂರ್ವಕ ಮನನ, ನಿದಿಧ್ಯಾಸನಗಳು ರಾಮಬಾಣದಂತೆ ಫಲಕಾರಿಯಾಗಬಲ್ಲವು.

ಈ ಪೀಠಿಕೆಯ ಹಿನ್ನೆಲೆಯಲ್ಲಿ, ವರಾಹಪುರಾಣದಲ್ಲಿ ಬಂದಿರುವ ಮಾರ್ಕಂಡೇಯ ಮುನಿಗಳ ಹಾಗೂ ಬ್ರಹ್ಮದೇವರ ಸಂವಾದ ರೂಪದಲ್ಲಿರುವ ‘ಕವಚ-ಸ್ತೋತ್ರಮಂತ್ರ’ದ ಅರ್ಥಾನುಸಂಧಾನ ಮಾಡೋಣ:

೧. ಮಾರ್ಕಂಡೇಯ ಮುನಿಗಳು, ಸಾಕ್ಷಾತ್ ವಿಷ್ಣುಪುತ್ರನಾದ, ಜಗತ್ತಿಗೆ ಅಜ್ಜನಾದ ಬ್ರಹ್ಮನ ಬಳಿ, ‘ಅತ್ಯಂತ ರಹಸ್ಯವಾದ, ಎಲ್ಲಾ ರೀತಿಯಲ್ಲೂ ಮನುಷ್ಯರನ್ನು ಸಂರಕ್ಷಿಸುವ, ಇದುವರೆಗೂ ಯಾರಿಗೂ ಹೇಳದಿರುವ ದಿವ್ಯ ಮಂತ್ರವನ್ನು ಉಪದೇಶಿಸು’’ ಎಂದು ಕೇಳಿದಾಗ, ಬ್ರಹ್ಮನು ಹೀಗೆ ಹೇಳುತ್ತಾನೆ:

**ಅಸ್ತಿ ಗುಹ್ಯತಮಂ ವಿಪ್ರ ಸರ್ವಭೂತೋಪಕಾರಕಮ್ ।**
**ದೇವ್ಯಾಸ್ತು ಕವಚಂ ಪುಣ್ಯಂ, ತಚ್ಛೃಣುಷ್ವ ಮಹಾಮುನೇ ॥ ೨ ॥**

''ಹೇ ಮಹಾಮುನಿ! ಸರ್ವಲೋಕಪಕಾರಿಯಾದ, ಅತ್ಯಂತ ರಹಸ್ಯತಮವಾದ, ಪುಣ್ಯಕರವಾದ ದೇವಿಯ ಕವಚಸ್ತೋತ್ರವನ್ನು ಹೇಳುವೆ, ಅದನ್ನು ಆಲಿಸು.''

ಬ್ರಹ್ಮ, ವಿಷ್ಣುವಿನ ಮಾಯೆಯನ್ನು ಕಂಡಿರುವ, ಶಿವನಿಂದ ದೀರ್ಘಾಯುಷ್ಯವನ್ನು ಪಡೆದಿರುವ ಮಾರ್ಕಂಡೇಯರನ್ನು (ಮೃಕಂಡುವಿನ ಪುತ್ರ) 'ಮಹಾಮುನಿ' ಎಂದು ಸಂಬೋಧಿಸುತ್ತಾ, ಸರ್ವವಿಘ್ನಗಳನ್ನು ನಿವಾರಿಸಿ, ದೇಹದ ಪ್ರತಿಯೊಂದು ಅಂಗಾಂಗವನ್ನು ರಕ್ಷಿಸುವ 'ಚಂಡೀಕವಚ'ವನ್ನು ಉಪದೇಶಿಸಲು ಆರಂಭಿಸುತ್ತಾನೆ. ಈ ಕವಚಸ್ತೋತ್ರದಲ್ಲಿ ಒಟ್ಟು ೫೫ ಶ್ಲೋಕಗಳಿವೆ.

೨) ಮೊದಲ ೫ ಸ್ತೋತ್ರಗಳಲ್ಲಿ ಒಂದೇ ಚೈತನ್ಯದ ೯ ರೂಪಗಳಾದ '**ನವದುರ್ಗೆ**'ಯರನ್ನು ತಿಳಿಸಲಾಗಿದೆ. ೧. ಶೈಲಪುತ್ರೀ (ಪರ್ವತರಾಜನ ಮಗಳು), ೨. ಬ್ರಹ್ಮಚಾರಿಣೀ (ತಪಸ್ಸನ್ನು ಮಾಡುವವಳು) ೩. ಚಂದ್ರಘಂಟಾ (ಚಂದ್ರನನ್ನೇ ಘಂಟೆಯಾಗಿ ಕಂಠದಲ್ಲಿ ಧರಿಸಿರುವವಳು), ೪. ಕೂಷ್ಮಾಂಡಾ (ಜಗತ್ತನ್ನೇ ಉದರದಲ್ಲಿರಿಸಿಕೊಂಡವಳು), ೫. ಸ್ಕಂದಮಾತಾ (ಷಣ್ಮುಖನ ತಾಯಿ), ೬. ಕಾತ್ಯಾಯನೀ (ಕತಮುನಿಯ ಮಗಳಾಗಿ ಪ್ರಕಟಗೊಂಡವಳು), ೭. ಕಾಲರಾತ್ರೀ(ಮೃತ್ಯುವನ್ನು ಕಬಳಿಸುವವಳು), ೮. ಗೌರೀ (ಜ್ಞಾನಸ್ವರೂಪಿಣಿಯು), ೯. ಸಿದ್ಧಿದಾತ್ರೀ (ಅಷ್ಟಸಿದ್ಧಿಗಳನ್ನು, ಕರ್ಮಫಲಗಳನ್ನೂ ನೀಡುವವಳು) – ಇವರೇ ನವದುರ್ಗೆಯರು.

೩) ಮುಂದೆ ಕವಚವನ್ನು ಭಕ್ತಿಯಿಂದ ಪಠಿಸುತ್ತಾ, ದೇವಿಗೆ ಶರಣಾಗುವವರಿಗೆ ದೊರೆಯುವ ಫಲದ ಬಗ್ಗೆ ತಿಳಿಸುತ್ತಾರೆ. ''ಅಗ್ನಿಯಲ್ಲಿ ಸಿಲುಕಿದವನು, ಶತ್ರುಗಳ ಮಧ್ಯದಲ್ಲಿ ಸಿಕ್ಕಿಬಿದ್ದಿರುವವನು, ಗೊಂಡಾರಣ್ಯದಲ್ಲಿ ಸಿಲುಕಿದವನು, – ಇಂಥವರೆಲ್ಲ ಆರ್ತರಾಗಿ ದುರ್ಗೆಗೆ ಶರಣಾದರೆ ಅವರಿಗೆ ಅಶುಭವಾಗದು. ಭಕ್ತಿಯಿಂದ ಸ್ಮರಿಸುವವರಿಗೆ ಸಮೃದ್ಧಿ ಉಂಟಾಗುತ್ತದೆ'' (೬, ೭, ೮).

೪) ನಾಲ್ಕು ಶ್ಲೋಕಗಳಲ್ಲಿ (೯, ೧೦, ೧೧, ೧೨) ಸಪ್ತಮಾತೃಕೆಯರ ವರ್ಣನೆ ಇದೆ.

**ಪ್ರೇತಸಂಸ್ಥಾ ತು ಚಾಮುಂಡಾ ವಾರಾಹೀ ಮಹಿಷಾಸನಾ ||**
**ಐಂದ್ರೀ ಗಜಸಮಾರೂಢಾ ವೈಷ್ಣವೀ ಗರುಡಾಸನಾ || ೯ ||**

''ಮೂಲಶಕ್ತಿಯ ಅಂಶಸ್ವರೂಪಳಾಗಿರುವ ಚಾಮುಂಡಿಗೆ ಪ್ರೇತವೇ ಆಸನ. ವರಾಹಮುಖದ ವಾರಾಹಿದೇವಿಗೆ ಕೋಣವೇ ಆಸನ (ವಾಹನ). ಐಂದ್ರಿ ಸ್ವರೂಪಳಾದ ದೇವಿಗೆ ಆನೆಯೇ ಆಸನ. ವೈಷ್ಣವೀ ಸ್ವರೂಪಳಿಗೆ ಗರುಡನೇ ಆಸನ (ವಾಹನ).''

ಪರಾಶಕ್ತಿ ಸ್ವರೂಪಳಾದ ದೇವಿಯು ಚಂಡ ಹಾಗೂ ಮುಂಡರೆಂಬ ಅಸುರರನ್ನು ಸಂಹರಿಸಿ, ಅವರು ಶಿರಸ್ಸನ್ನು ಹಿಡಿದು ತಂದವಳಾದ್ದರಿಂದ 'ಚಾಮುಂಡಾ' ಎಂದು ಪ್ರಸಿದ್ಧಿ ಪಡೆದಿದ್ದಾಳೆ. ಈಕೆಗೆ ಪ್ರೇತವೇ ಆಸನ. 'ಪ್ರೇತ' ಎಂದರೆ, ಸ್ಥೂಲ ಶರೀರದ ಒಳಗೆ ಇರುವ ಸೂಕ್ಷ್ಮಶರೀರ. ೫ ಜ್ಞಾನೇಂದ್ರಿಯಗಳು, ೫ ಕರ್ಮೇಂದ್ರಿಯಗಳು, ೫ ಪ್ರಾಣಗಳು ಹಾಗೂ ಮನಸ್ಸು, ಬುದ್ಧಿ – ಹೀಗೆ ೧೭ ಅವಯವಗಳಿಂದಾದ ಸೂಕ್ಷ್ಮ ಶರೀರವೇ 'ಪ್ರೇತ' ಶರೀರವಿದ್ದು, ಇದರಲ್ಲಿಯೂ 'ಚಾಮುಂಡಿ' ಇರುತ್ತಾಳೆ.

ಐದನೆಯವಳಾದ ಮಾಹೇಶ್ವರಿಯು ವೃಷಭವಾಹನಳು. ಆರನೆಯವಳಾದ ಕೌಮಾರಿಯು (ಕುಮಾರನಲ್ಲಿರುವ ಶಕ್ತಿ) ಶಿಖಿವಾಹನಳು (ನವಿಲೇ ವಾಹನ). ಲಕ್ಷ್ಮೀದೇವಿಯು ಪದ್ಮವನ್ನು ಹಿಡಿದುಕೊಂಡು, ಕಮಲದ ಮೇಲೆ ಕುಳಿತಿರುವವಳು. ಈಶ್ವರೀ ದೇವಿಯು, ಬಿಳಿಯ ಬಣ್ಣವನ್ನು ಹೊಂದಿ ವೃಷಭವಾಹನಳಾಗಿರುವಳು. ಬ್ರಹ್ಮಾಣಿ ದೇವಿಯು (ಬ್ರಾಹ್ಮೀ) ಹಂಸದ ಮೇಲೆ ಕುಳಿತಿರುವವಳು. ಈ ಸಪ್ತಮಾತೃಕೆಯರು ಶಿವ, ಇಂದ್ರ, ವಿಷ್ಣು, ಕುಮಾರ, ಬ್ರಹ್ಮ ಇವರಲ್ಲಿರುವ ಶಕ್ತಿ ಸ್ವರೂಪಿಣಿಯರೇ ಆಗಿರುವರು.

೫) ಎರಡು ಶ್ಲೋಕಗಳಲ್ಲಿ (೧೩, ೧೪) ರಥಾರೂಢರಾಗಿರುವ ದೇವಿಯರ ಕೈಯಲ್ಲಿರುವ ವಿವಿಧ ಆಯುಧಗಳನ್ನು ವರ್ಣಿಸಲಾಗಿದೆ:

**ಶಂಖಂ ಚಕ್ರಂ ಗದಾಂ ಶಕ್ತೀಂ ಹಲಂ ಚ ಮುಸಲಾಯುಧಮ್ |**
**ಖೇಟಕಂ ತೋಮರಂ ಚೈವ ಪರಶುಂ ಪಾಶಮೇವ ಚ || ೧೩||**

ದುಷ್ಟರ ನಾಶಕ್ಕಾಗಿ ಹಾಗೂ ಭಕ್ತರ ರಕ್ಷಣೆಗೆ ಹಾಗೂ ಭಕ್ತರ ರಕ್ಷಣೆಗಾಗಿ ದೇವಿಯರು ಶಂಖ (ಸಂಪತ್ತಿನ ಪ್ರತೀಕ), ಚಕ್ರ (ಕಾಲಚಕ್ರದ ಪ್ರತೀಕ) ಗದೆ (ದಂಡನೆಯ ಪ್ರತೀಕ), ಶಕ್ತಿ, ನೇಗಿಲು (ಹಲ), ಮುಸಲಾ (ಒನಕೆ), ಗುರಾಣಿ(ಖೇಟಕ), ತೋಮರ (ಕಡೆಗೋಲಿನಾಕಾರದ ಆಯುಧ), ಪರಶು (ಕೊಡಲಿ), ಪಾಶ (ಹಗ್ಗ) — ಇವುಗಳನ್ನು ಧರಿಸಿದ್ದಾರೆ. ಅಲ್ಲದೆ, ಕುಂತಾಯುಧ (ಹಲ್ಲುಗಳಿರುವ ದೊಣ್ಣೆ), ತ್ರಿಶೂಲ, ಶಾರ್ಙ್ಗಾಯುಧ (ಪಶುವಿನ ಕೋಡಿನ ಆಯುಧ), ಈ ಆಯುಧಗಳನ್ನು ಹಿಡಿದಿರುವವರು.

ಈ ಆಯುಧಗಳು ಮೇಲ್ನೋಟಕ್ಕೆ ಸಂಹಾರಕ್ಕೆ ರಕ್ಷಣೆಗೆ ಎಂದು ಕಾಣಿಸಿದರೂ, ಅವುಗಳು ವಿವಿಧ ಅರ್ಥಗಳನ್ನು ಧ್ವನಿಸುತ್ತವೆ.

೬) ಮುಂದಿನ ಶ್ಲೋಕಗಳಲ್ಲಿ (೧೫, ೧೬, ೧೭, ೧೮, ೧೯) ಎಲ್ಲಾ ದಿಕ್ಕುಗಳಲ್ಲೂ, 'ಸುತ್ತಲೂ ನಿಂತು ರಕ್ಷಿಸು' ಎನ್ನುವ ಪ್ರಾರ್ಥನೆ ಇದೆ:

ಐಂದ್ರಿಯು ಪೂರ್ವದಲ್ಲೂ, ಆಗ್ನೇಯಿಯು ಆಗ್ನೇಯ ದಿಕ್ಕಿನಲ್ಲೂ, ವಾರಾಹಿಯು (ಯಮಶಕ್ತಿ) ದಕ್ಷಿಣ ದಿಕ್ಕಿನಲ್ಲೂ, ಖಡ್ಗಧಾರಿಣಿಯು ನೈಋತ್ಯದಲ್ಲೂ, ವಾರುಣಿಯು ಪಶ್ಚಿಮ ದಿಕ್ಕಿನಲ್ಲೂ, ಮೃಗವಾಹಿನಿಯು ವಾಯುವ್ಯದಲ್ಲೂ, ಕೌಬೇರಿಯು ಉತ್ತರದಲ್ಲೂ, ಶೂಲಧಾರಿಣಿಯು ಈಶಾನ್ಯದಲ್ಲೂ, ಬ್ರಹ್ಮಾಣಿಯು ಮೇಲುಗಡೆಯಲ್ಲೂ, ವೈಷ್ಣವಿಯು ಕೆಳಗೂ ಕಾಪಾಡಲಿ. ಹೀಗೆ ಶವವಾಹನೆ (=ಪ್ರೇತಾಸನಾ)ಯಾದ ಚಾಮುಂಡಿಯು ಹತ್ತು ದಿಕ್ಕುಗಳಲ್ಲಿಯೂ ರಕ್ಷಿಸಲಿ. ಜಯೆಯು ಮುಂದಿ

ನಿಂದಲೂ, ವಿಜಯೆಯು ಹಿಂದಿನಿಂದಲೂ, ಅಜಿತೆಯು (ಯಾರಿಂದಲೂ ಗೆಲ್ಲಲ್ಪಡದವಳು) ಎಡದಲ್ಲಿಯೂ, ಅಪರಾಜಿತೆಯು (ಸೋಲಿಲ್ಲದವಳು) ಬಲದಲ್ಲಿಯೂ ಕಾಪಾಡಲಿ.

೭. 'ಚಲಿಸುವ ದೇವಾಲಯವಾದ ದೇಹ'ದ ಪ್ರತಿಯೊಂದು ಅವಯವಗಳಲ್ಲೂ ನಿಂತು ದೇವಿಯು ರಕ್ಷಿಸಲಿ ಎಂದು ೧೫ ಶ್ಲೋಕಗಳಲ್ಲಿ (೨೦ ರಿಂದ ೩೪) ಪ್ರಾರ್ಥಿಸಲಾಗಿದೆ.

**'ಶಿವೋ ಭೂತ್ವಾ ಶಿವಂ ಯಜೇತ್'**- ಅಂದರೆ ನಾವು ಶಿವಸ್ವರೂಪರೇ ಆಗಿ, ಶಿವನನ್ನು ಪೂಜಿಸಬೇಕೆಂಬುದು ಆರ್ಷೇಯವಾಣಿ. ಈ ಸ್ತೋತ್ರದಲ್ಲಿ ದೇಹದ ಪ್ರತಿಯೊಂದು ಅವಯವಗಳಲ್ಲೂ ದೇವಿಯನ್ನು ಆಹ್ವಾನಿಸಿ, ಆಕೆಯು ತನ್ನನ್ನು ರಕ್ಷಿಸಲಿ ಎಂದು ಪ್ರಾರ್ಥಿಸಲಾಗಿದೆ. ಶಿಖೆಯನ್ನು(ನೆತ್ತಿಯ ಮೇಲಿನ ಭಾಗ) ಉದ್ಯೋತಿನಿದೇವಿಯು (ಬುದ್ಧಿಯನ್ನು ಬೆಳಗಿಸುವವಳು), ಮೂರ್ಧೆಯನ್ನು (ಪೂರ್ಣತಲೆ) ಉಮೆಯು, ಲಲಾಟವನ್ನು (ಹಣೆ) ಮಾಲಾಧರಿಯು (ಜಪಮಾಲೆ ಧರಿಸಿದವಳು), ಹುಬ್ಬುಗಳನ್ನು ಯಶಸ್ವಿನಿಯು (ಮೂರು ಲೋಕದಲ್ಲೂ ಪ್ರಸಿದ್ಧ ಳಾದವಳು), ಹುಬ್ಬುಗಳ ಮಧ್ಯಭಾಗವನ್ನು(ಆಜ್ಞಾಚಕ್ರದ ಕೇಂದ್ರ) ತ್ರ್ಯಂಬಕೆಯು(ಮೂರು ಕಣ್ಣುಗ್ಳುಳ್ಳವಳು), ಮೂಗಿನ ಹೊಳ್ಳೆಗಳನ್ನು ಯಮಘಂಟಾದೇವಿಯು, ಕಣ್ಣುಗಳನ್ನು ಶಂಖಿನಿಯು (ನಿಧಿಗಳ ಅಧಿದೇವತೆ), ದ್ವಾರದಲ್ಲಿ ವಾಸ ಮಾಡುವ ದೇವಿಯು (ದ್ವಾರಾವತೀ ಹಾಗೂ ಗಂಗಾದ್ವಾರದಲ್ಲಿ ವಾಸಮಾಡುವವಳು) ಕಿವಿಗಳ ಮಧ್ಯಭಾಗದಲ್ಲಿ ಇದ್ದುಕೊಂಡು ರಕ್ಷಿಸಲಿ.

ಕೆನ್ನೆಗಳನ್ನು ಕಾಲಿಕಾದೇವಿಯು, ಕಿವಿಗಳ ಬುಡವನ್ನು ಶಾಂಕರಿಯು (ಮಂಗಳಸ್ವರೂಪಿಣಿಯು), ಘ್ರಾಣೇಂದ್ರಿಯವನ್ನು (ವಾಸನೆ ತಿಳಿಯುವ ಇಂದ್ರಿಯ) ಸುಗಂಧಾದೇವಿಯು, ಮೇಲ್ತುಟಿಯನ್ನು(ಓಷ್ಠ) ಚರ್ಚಿಕಾದೇವಿಯು, ಕೆಳದುಟಿಯನ್ನು (ಅಧರ) ಅಮೃತಕಲದೇವಿಯು, ನಾಲಿಗೆಯನ್ನು ಸರಸ್ವತಿದೇವಿಯೂ (ರಸವತ್ತಾದವಳು), ಕಂಠವನ್ನು ಚಂಡಿಕೆಯು, ಹಲ್ಲುಗಳನ್ನು ಕೌಮಾರೀ ದೇವಿಯು, ಕುತ್ತಿಗೆಯ ಗಂಟಿನ ಭಾಗವನ್ನು (ಘಂಟಿಕಾಂ) ಚಿತ್ರಘಂಟಾ ದೇವಿಯು, ಬಾಯಿಯ ಅಂಗಳವನ್ನು (ತಾಲುಕೇ -palatals) ಮಹಾಮಾಯಾ ದೇವಿಯು, ಗಲ್ಲವನ್ನು ಕಾಮಾಕ್ಷಿ ದೇವಿಯು (ಇಚ್ಛೆಪೂರೈಸುವ ಕಣ್ಣುಳ್ಳವಳು), ಗಲ್ಲವನ್ನು (ಚಿಬುಕಂ), ವಾಗಿಂದ್ರಿಯವನ್ನು(ವಾಚಂ) ಸರ್ವಮಂಗಳಾದೇವಿಯು, ಕುತ್ತಿಗೆಯನ್ನು (ಗ್ರೀವಾ) ಭದ್ರಕಾಳಿಯು (ಮಂಗಳವನ್ನು ತಂದುಕೊಡುವವಳು), ಮಣಿದಂಡವನ್ನು (ಪೃಷ್ಠವಂಶ-spinal cord) ಬಿಲ್ಲನ್ನು ಧರಿಸಿರುವ ದೇವಿಯು, ಕತ್ತಿನ ಹೊರಭಾಗವನ್ನು ನೀಲಗ್ರೀವೆಯು (ಪಾರ್ವತೀ), ಕಂಠನಾಳವನ್ನು(ನಲಿಕಂ) ನಲಕೂಬರೀ ದೇವಿಯೂ ಕಾಪಾಡಲಿ. ಖಡ್ಗಧಾರಿಣೀ ದೇವಿಯು ಹೆಗಲುಗಳನ್ನು (ಸ್ಕಂದೌ), ವಜ್ರಧಾರಿಯು ತೋಳುಗಳನ್ನು (ಬಾಹು), ದಂಡಧಾರಿಣಿ ದೇವಿಯು ಹಸ್ತಗಳನ್ನು, ಅಂಬಿಕೆಯು ಕೈಬೆರಳುಗಳನ್ನು ರಕ್ಷಿಸಲಿ. ಶೂಲಧಾರಿಣಿಯು ಉಗುರುಗಳನ್ನು, ಹೊಟ್ಟೆಯನ್ನು (ಕುಕ್ಷಿ-ಎದೆಯಿಂದ ನಾಭಿಯವರೆಗೆ) ಕುಲೇಶ್ವರಿಯು, ಸ್ತನಗಳನ್ನು ಮಹಾದೇವಿಯು, ಮನಸ್ಸನ್ನು ಶೋಕವಿನಾಶಿನೀ ದೇವಿಯು, ಹೃದಯವನ್ನು ಲಲಿತಾದೇವಿಯು (ಅತ್ಯಂತ ಸುಂದರಿಯು), ಉದರವನ್ನು (ನಾಭಿಯ ಅಕ್ಕಪಕ್ಕದ ಭಾಗ) ಶೂಲಧಾರಿಣೀ ದೇವಿಯು, ನಾಭಿಯನ್ನು (ಹೊಕ್ಕಳು) ಕಾಮಿನೀ ದೇವಿಯು, ಗುಹ್ಯವನ್ನು(ರಹಸ್ಯಅವಯವ) ಗುಹೇಶ್ವರಿ ದೇವಿಯು, ಜನನೇಂದ್ರಿಯವನ್ನು (ಮೇಢ್ರಂ) ಕಾಮಿಕಾ ದೇವಿಯು, ಗುದವನ್ನು (Rectum) ಮಹಿಷವಾಹಿನಿಯು, ಸೊಂಟವನ್ನು (ಕಟೀ) ಭಗವತೀ ದೇವಿಯು, ಮಂಡಿಗಳನ್ನು(ಜಾನುನೀ) ವಿಂಧ್ಯವಾಸಿನೀ ದೇವಿಯು, ಜಂಘೆಗಳನ್ನು(ಮಂಡಿಯಿಂದ ಕಾಲು ಗಂಟಿನ ನಡುವಿನ ಭಾಗ) ಮಹಾಬಲಾದೇವಿಯು, ಪಾದದ ಗಂಟನ್ನು (ಗುಲ್ಫ-ಹರಡು) ನಾರಸಿಂಹೆಯು, ಪಾದಗಳ ಹಿಮ್ಮಡಿಗಳನ್ನು ತೈಜಸಿಯು, ಕಾಲಿನ ಬೆರಳುಗಳನ್ನು(ಪಾದಾಂಗುಲೀಃ) ಲಕ್ಷ್ಮೀ ದೇವಿಯು, ಪಾದದ ಉಗುರುಗಳನ್ನು (ನಖಾನ್) ದಂಷ್ಟ್ರಾಕರಾಲೀ ದೇವಿಯು, ತಲೆಯ ಕೂದಲುಗಳನ್ನು ಊರ್ಧ್ವಕೇಶಿನೀ ದೇವಿಯು, ಕೂದಲಿನ ಬುಡವನ್ನು(ರೋಮಕೂಪ) ಕೌಮಾರಿಯು, ತ್ವಕ್ ಅನ್ನು (ಚರ್ಮದ ಒಳಪದರ) ವಾಗೀಶ್ವರೀ ದೇವಿಯು, ರಕ್ತ, ಮಜ್ಜ (Marrow-ಮೂಳೆಯ ಒಳಗಿರುವ ದ್ರವ), ವಸಾ (ಮಾಂಸದ ಮೇಲಿನ ರಸ-'ಮಾಂಸಸ್ನೇಹ'), ಮಾಂಸ, ಮೂಳೆ ಮೇದಸ್ಸು (ಮಾಂಸದ ಒಳಗಿರುವ ದ್ರವ) -ಇವುಗಳನ್ನು ಪಾರ್ವತೀದೇವಿಯು ಕಾಪಾಡಲಿ.

ಕರುಳುಬಳ್ಳಿಯನ್ನು (ಅಂತ್ರಾಣಿ-Intestine) ಕಾಲರಾತ್ರೀ ದೇವಿಯು, ಪಿತ್ಥಧಾತುವನ್ನು ಮುಕುಟೇಶ್ವರೀ ದೇವಿಯು, ಪದ್ಮಾವತೀ ದೇವಿಯು ಹೃದಯಕಮಲವನ್ನು (ಪದ್ಮಕೋಶ), ಕಫ ಧಾತುವನ್ನು ಚೂಡಾಮಣಿ ದೇವಿಯು, ಉಗುರುಗಳ ಕಾಂತಿಯನ್ನು (ನಖಜ್ವಾಲಾ) ಜ್ವಾಲಾಮುಖಿಯು (ಅಗ್ನಿಯ ಪತ್ನಿ), ಎಲ್ಲಾ ಕೀಲುಗಳನ್ನು (joints) ಅಭೇದ್ಯಾದೇವಿಯು, ವೀರ್ಯವನ್ನು (ಶುಕ್ರಂ-sperms ) ಬ್ರಹ್ಮಾಣಿಯು, ನೆರಳನ್ನು (ಛಾಯಾ) ಛತ್ರೇಶ್ವರಿಯು ರಕ್ಷಿಸಲಿ.

(೮) ಶರೀರದ ೫೬ ಭಾಗಗಳಲ್ಲಿ, ದೇವಿಯು ೫೬ ರೂಪಗಳಿಂದ ನೆಲೆಸಿ, ತಾನು ಮಾಡುವ ಧರ್ಮಕಾರ್ಯವನ್ನು ಯಶಸ್ವಿಗೊಳಿಸಲಿ ಎಂಬ ನಮ್ರ ಪ್ರಾರ್ಥನೆಯ ಬಳಿಕ ''ಅಂತರಿಂದ್ರಿಯಗಳನ್ನು ರಕ್ಷಿಸಲಿ'' ಎಂಬ ಪ್ರಾರ್ಥನೆ ೩ ಶ್ಲೋಕಗಳಲ್ಲಿ (೩೫, ೩೬,೩೭) ಇದೆ:

**ಅಹಂಕಾರಂ ಮನೋ ಬುದ್ಧಿಂ ರಕ್ಷ ಮೇ ಧರ್ಮಚಾರಿಣೀ ।**
**ಪ್ರಾಣಾಪಾನೌ ತಥಾ ವ್ಯಾನಂ ಸಮಾನೋದಾನಮೇವ ಚ ॥**

'ನನ್ನ ಅಹಂಕರಣ ವೃತ್ತಿಯನ್ನು (ನಾನಲ್ಲದದನ್ನು 'ನಾನು' ಎಂದು ಹೇಳುವುದು), ಮನಸ್ಸನ್ನು (ಸಂಶಯಾತ್ಮಿಕಾ ವೃತ್ತಿ), ಬುದ್ಧಿಯನ್ನು(ನಿಶ್ಚಯಾತ್ಮಿಕಾ ವೃತ್ತಿ) ಪ್ರಾಣ, ಅಪಾನ, ಉದಾನ, ಸಮಾನ, ವ್ಯಾನಗಳೆಂಬ ಪಂಚಪ್ರಾಣಗಳನ್ನು (ದೇಹದ ವಿವಿಧ

ಭಾಗಗಳಲ್ಲಿ ಸಂಚರಿಸುವ ವಾಯು) ಧರ್ಮಚಾರಿಣಿಯು, ಧರ್ಮಕಾರ್ಯಗಳನ್ನು ಮಾಡುವುದಕ್ಕಾಗಿ ರಕ್ಷಿಸಲಿ.''

ನನ್ನ ಪ್ರಾಣಕ್ಕೆ ಸಮಾನವಾದ ಎಲ್ಲವನ್ನೂ ವಜ್ರಾಯುಧವನ್ನು ಹಿಡಿದಿರುವ ಶೋಭನಾದೇವಿಯು (ಮಂಗಳಾದೇವಿ), ರೂಪ, ರಸ, ಗಂಧ, ಸ್ಪರ್ಶ, ಶಬ್ದಗಳನ್ನು (= ಪಂಚತನ್ಮಾತ್ರೆಗಳನ್ನು) ಯೋಗಿನೀದೇವಿಯು ರಕ್ಷಿಸಲಿ. ನನ್ನ ಸತ್ತ್ವ, ರಜಸ್, ತಮಸ್‌ಗಳೆಂಬ ತ್ರಿಗುಣಗಳನ್ನು ಸದಾಕಾಲ ನಾರಾಯಣೀ ದೇವಿಯು ರಕ್ಷಿಸಲಿ. ಆಯುಷ್ಯವನ್ನು ವಾರಾಹಿ ದೇವಿಯು, ಧರ್ಮಾಚರಣೆಯನ್ನು ವೈಷ್ಣವೀದೇವಿಯು ಕಾಪಾಡಲಿ.

(೯) ಸಾಮಾಜಿಕ ಪ್ರತಿಷ್ಠೆ, ವಂಶ, ಕುಟುಂಬ, ಸಂಪತ್ತು – ಈ ಎಲ್ಲವನ್ನೂ ದೇವಿಯು ರಕ್ಷಿಸಲಿ ಎಂದು ೪ ಶ್ಲೋಕಗಳಲ್ಲಿ (೩೮, ೩೯, ೪೦, ೪೧) ಪ್ರಾರ್ಥನೆ ಇದೆ;

**ಯಶಃ ಕೀರ್ತಿಂ ಚ ಲಕ್ಷ್ಮೀಂ ಚ ಧನಂ ವಿದ್ಯಾಂ ಚ ಚಕ್ರಿಣೀ ।**
**ಗೋತ್ರಮಿಂದ್ರಾಣಿ ಮೇ ರಕ್ಷೇತ್ ಪಶೂನ್ಮೇ ರಕ್ಷ ಚಂಡಿಕೇ ॥**

ಯಶಸ್ಸನ್ನು, ಕೀರ್ತಿಯನ್ನು, ಐಶ್ವರ್ಯವನ್ನು, ಧನವನ್ನು, ವಿದ್ಯೆಯನ್ನು ಚಕ್ರಿಣಿಯು (ಚಕ್ರಧಾರಿಣಿಯು) ರಕ್ಷಿಸಲಿ. ಇಂದ್ರಾಣೀ ದೇವಿಯು ವಂಶವನ್ನು ರಕ್ಷಿಸಲಿ. ಹೇ ಚಂಡಿಕೇ! ನನ್ನ ಪಶುಗಳನ್ನು ರಕ್ಷಿಸು. ಮಹಾಲಕ್ಷ್ಮಿಯು ಪುತ್ರರನ್ನು ರಕ್ಷಿಸಲಿ. ಭೈರವಿಯು, ಪತಿಯನ್ನು ರಕ್ಷಿಸಲಿ. ನಡೆದಾಡುವ ಮಾರ್ಗವನ್ನು (ಪಂಥಾನಂ) ಸುಪಥಾ ದೇವಿಯು ರಕ್ಷಿಸಲಿ. ಕ್ಷೇಮಕರೀ ದೇವಿಯ ಮರ್ಗದಲ್ಲಿ ಕ್ಷೇಮವನ್ನು ಉಂಟುಮಾಡಲಿ. ಅಪರಾಜಿತೆಯಾದ ಮಹಾಲಕ್ಷ್ಮಿಯು ಹೆಬ್ಬಾಗಿಲಿನಲ್ಲಿ ಎಲ್ಲಾ ಕಡೆ ನೆಲೆಸಿರಲಿ. ರಕ್ಷಾಕವಚಕ್ಕಾಗಿ ಬೇಡಿಕೊಳ್ಳದ ಯಾವುದೇ ಸ್ಥಾನವಿದ್ದರೂ, ಅದೆಲ್ಲವನ್ನೂ ಪಾಪನಾಶಿನಿಯಾದ ಜಯಂತೀ ದೇವಿಯು ರಕ್ಷಿಸಲಿ.

೧೦) ಕವಚಸ್ತೋತ್ರ–ಮಂತ್ರದ ಪಠನದಿಂದ ಸಿದ್ಧಿಸುವ ಫಲಗಳನ್ನು ಕೊನೆಯ ೧೪ ಶ್ಲೋಕಗಳಲ್ಲಿ (೪೨ ರಿಂದ ೫೫) ಬ್ರಹ್ಮನು ಮಾರ್ಕಂಡೇಯ ಮುನಿಗೆ ತಿಳಿಸಿದ್ದಾನೆ :

ಶುಭಾಕಾಂಕ್ಷಿಯು ದೇವಿಯ ಕವಚಮಂತ್ರವನ್ನು ಭಕ್ತಿಯಿಂದ ಪಠಿಸಿ, ದೇವಿಯನ್ನು ಆವಾಹಿಸಿಕೊಂಡು ರಕ್ಷಾಕವಚವನ್ನು ಧರಿಸಿಯೇ ಸಕಲಕಾರ್ಯಗಳನ್ನು ಮಾಡಬೇಕು.

**ತತ್ರ ತತ್ರಾರ್ಥಲಾಭಶ್ಚ ವಿಜಯಃ ಸಾರ್ವಕಾರ್ಮಿಕಃ ।**
**ಯಂ ಯಂ ಚಿಂತಯತೇ ಕಾಮಂ ತಂ ತಂ ಪ್ರಾಪ್ನೋತಿ ನಿಶ್ಚಿತಮ್ ॥**

'ದೇವಿಯ ರಕ್ಷಾಕವಚವನ್ನು ಧರಿಸಿ ಹೋದಲ್ಲೆಲ್ಲ ಧನಲಾಭ, ಸಕಲಕಾರ್ಯಸಿದ್ಧಿಯು ಉಂಟಾಗುವುದು. ಅವನ ಎಲ್ಲಾ ಕಾಮನೆಗಳೂ ನಿಶ್ಚಯವಾಗಿಯೂ ಪೂರ್ಣಗೊಳ್ಳುವುವು.'

ದೇವತೆಗಳಿಗೂ ದೊರಕದಿರುವ ಈ ಕವಚ ಮಂತ್ರವನ್ನು ಪಠಿಸುವ ಮನುಷ್ಯನು, ಇಹಲೋಕದಲ್ಲಿ ಸಕಲೈಶ್ವರ್ಯಗಳನ್ನು ಪಡೆದು ಎಲ್ಲೆಡೆ ಗೌರವಕ್ಕೆ ಪಾತ್ರನಾಗುತ್ತಾನೆ. ಜೀವನದ ಹೋರಾಟದಲ್ಲಿ ಎಂದೂ ಸೋಲಾಗದೆ ನಿರ್ಭಯನಾಗಿರುತ್ತಾನೆ.

**ಯಃ ಪಠೇತ್ ಪ್ರಯತೋ ನಿತ್ಯಂ ತ್ರಿಸಂಧ್ಯಂ ಶ್ರದ್ಧಯಾಽನ್ವಿತಃ ।**
**ದೈವೀಕಲಾ ಭವೇತ್ತಸ್ಯ ತ್ರೈಲೋಕ್ಯೇಷ್ವಪರಾಜಿತಃ ॥**

'ಶ್ರದ್ಧಾ-ಭಕ್ತಿಗಳಿಂದ ಪ್ರತಿದಿನವೂ ಮೂರು ಸಂಧ್ಯಾ ಕಾಲಗಳಲ್ಲೂ ಏಕಾಗ್ರಚಿತ್ತದಿಂದ ಪಠಿಸುವವರು, ದೈವೀಕಾಂತಿಯನ್ನು ಹೊಂದಿ ಎಲ್ಲ ಕಡೆ ಜಯಶಾಲಿಗಳಾಗುತ್ತಾರೆ.'

ಅಪಮೃತ್ಯುವಿನಿಂದ ಪರಿಹಾರ, ನೂರುವರ್ಷದ ಆನಂದದ ಬದುಕು, ಭಯಂಕರ ವ್ಯಾಧಿಗಳಿಂದ ಮುಕ್ತಿ, ಎಲ್ಲಾ ರೀತಿಯ ವಿಷಗಳಿಂದ ಪರಿಹಾರ, ಮಾಟ-ಮಂತ್ರವೇ ಮೊದಲಾದ ವ್ಯಭಿಚಾರಗಳಿಂದ ಬಿಡುಗಡೆ, ಸಕಲ ಕ್ರೂರ ಪ್ರಾಣಿಗಳ ಬಾಧೆಯಿಂದ ಮುಕ್ತಿ, ಕ್ಷುದ್ರದೇವತೆಗಳಿಂದ ಒದಗಿ ಬರುವ ತೊಂದರೆಗಳಿಂದ ಮುಕ್ತಿ, ಗ್ರಹ-ಭೂತ-ಪಿಶಾಚಿಗಳ ಪೀಡಾಪರಿಹಾರ ಇವೆಲ್ಲವೂ ಕವಚಮಂತ್ರದ ಪಠನದಿಂದ ಸಿದ್ಧಿಸುತ್ತವೆ.

**ಮಾನೋನ್ನತಿಃ ಭವೇದ್ರಾಜ್ಞಃ ತೇಜೋವೃದ್ಧಿಕರಂ ಪರಮ್ ।**
**ಯಶಸಾ ವರ್ಧತೇ ಸೋಽಪಿ ಕೀರ್ತಿಮಂಡಿತಭೂತಲೇ ॥**

'ಕವಚ ಮಂತ್ರವನ್ನು ಪಠಿಸಿ, ದೇವಿಯನ್ನು ಅಂತರಂಗದಲ್ಲಿ ಸ್ಥಾಪಿಸಿಕೊಂಡವನು ರಾಜಸನ್ಮಾನವನ್ನು ಪಡೆಯುವನು. ಅತ್ಯಂತ ತೇಜೋವಂತನಾಗುವನು. ಎಲ್ಲಾ ಕಡೆ ಆತನ ಕೀರ್ತಿಯು ಹರಡಿ ಯಶಸ್ಸಿನಿಂದ ಬೆಳಗುತ್ತಾನೆ.'

ಕವಚ ಪಾರಾಯಣ ಮಾಡುವ ಭಕ್ತ, ಪುತ್ರ-ಪೌತ್ರರಿಂದ ಕೂಡಿದ ಸಂತತಿಯು ಭೂಮಿಯು ಇರುವವರೆಗೂ ನೆಲೆಸಿರುತ್ತದೆ. ಭೌತಿಕ ಶರೀರ ತ್ಯಜಿಸಿದ ಬಳಿಕ ಆ ಭಕ್ತನು, ದೇವಿಯ ಅನುಗ್ರಹದಿಂದಲೇ ಶಾಶ್ವತವಾದ, ಆನಂದದ ನೆಲೆಯಾದ ಮೋಕ್ಷ ಸ್ಥಾನವನ್ನು ಪಡೆದುಕೊಳ್ಳುವನು.

ಈ ಕವಚ ಮಂತ್ರದ ಅರ್ಥಾನುಸಂಧಾನದ ಚಿಂತನೆ, ಕವಚ ಮಂತ್ರ ಪಠನಕ್ಕೆ ಪ್ರೇರಣೆ ನೀಡಲಿ. 'ಆಕೆಯು ಸಕಲರನ್ನೂ ನಮ್ಮ ರಾಷ್ಟ್ರವನ್ನೂ ಸಂರಕ್ಷಿಸಲಿ'' ಎಂಬ ಪ್ರಾರ್ಥನೆ ನಮ್ಮೆಲ್ಲರದಾಗಲಿ.

ನಿಃಸ್ವಾರ್ಥವಾಗಿ ಕೆಲಸ ಮಾಡುವುದರಿಂದ ಮನಸ್ಸು ಪರಿಶುದ್ಧವಾಗುತ್ತದೆ. ಮನಸ್ಸು ಪರಿಶುದ್ಧವಾದಾಗ ಅಲ್ಲಿ ಜ್ಞಾನ ಮತ್ತು ಭಕ್ತಿಗಳ ಉದಯವಾಗುವುದು. ಜ್ಞಾನವು ಆತ್ಮನ ಸ್ವಭಾವವೇ ಆಗಿದೆ, ಆದರೆ ಅದು ಅಜ್ಞಾನದಿಂದ ಆವರಿಸಿದೆ. ನಿಷ್ಕಾಮಕರ್ಮದ ಉದ್ದೇಶ ಈ ಆವರಣವನ್ನು ನಿವಾರಿಸುವುದು. ಮನಸ್ಸು ಶುದ್ಧವಾದ ಕೂಡಲೇ ಜ್ಞಾನದ ಉದಯವಾಗುವುದು.

— ಸ್ವಾಮಿ ಶಾರದಾನಂದ